ಎಸ್‌ಪಿ ಕಚೇರೀಲಿ ಪತ್ನಿಯನ್ನೇ ಇರಿದು ಕೊಂದ ಕಾನ್‌ಸ್ಟೇಬಲ್

1ನೇ ಪುಟದಿಂದ ▶ ಬೇರೆ ಬೇರೆ ಜಾತಿಯೆಂಬ ಕಾರಣಕ್ಕೆ ಪೋಷಕರು ವಿರೋಧಿಸಿದ್ದರೂ ಕಿವಿಗೊಡದೆ ಲೋಕನಾಥ್ ಮತ್ತು ಮಮತಾ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ಆರಂಭದಲ್ಲಿ ಸಂಸಾರ ಚೆನ್ನಾಗಿಯೇ ಇತ್ತು. ಇಬ್ಬರು ಗಂಡು ಮಕ್ಕಳೂ ಹುಟ್ಟಿದ್ದರು.

ಆದರೆ ಕೆಲ ವರ್ಷಗಳ ನಂತರ ಲೋಕನಾಥ್‌ಗೆ ವರದಕ್ಷಿಣೆ ಭೂತ ಅಂಟಿಕೊಂಡಿದ್ದು, ಪತ್ನಿಗೆ ಕಿರುಕುಳ ನೀಡಲು ಆರಂಭಿಸಿದ್ದ ಎನ್ನಲಾಗಿದೆ. ಇದೇ ವಿಚಾರಕ್ಕೆ ಪತ್ನಿಗೆ ಕಿರುಕುಳ ನೀಡಿದ್ದಲ್ಲದೆ, ದೈಹಿಕವಾಗಿ ಹಲ್ಲೆ ಮಾಡುತ್ತಿದ್ದ ಎನ್ನಲಾಗಿದೆ. ಈ ವಿಷಯ ಮಮತಾ ತನ್ನ ಪೋಷಕರಿಗೂ ಹೇಳಿದ್ದಳು. ಹಲವು ಬಾರಿ ರಾಜಿ ಪಂಚಾಯಿತಿ ನಡೆಸಿ ಒಟ್ಟು ಮಾಡಲಾಗಿತ್ತು ಎನ್ನಲಾಗಿದೆ.

ಕಳೆದ ಮೂರ್ನಾಲ್ಕು ದಿನಗಳಿಂದ ಪತಿ-ಪತ್ನಿ ನಡುವೆ ಜೋರಾಗಿ ಜಗಳ ನಡೆದಿದೆ ಎನ್ನಲಾಗಿದೆ. ಎಂದಿನಂತೆ ಗಂಡ ಸರಿ ಹೋಗುತ್ತಾನೆ ಎಂದು ಮಮತಾ ಸುಮ್ಮನಾದರೂ ದೌರ್ಜನ್ಯ ಮಿತಿ ಮೀರಿದಾಗ, ಎಸ್‌ಪಿಗೆ ದೂರು ಕೊಡುವುದಾಗಿ ಪತಿಗೆ ಹೇಳಿ ಸೋಮವಾರ ಬೆಳಗ್ಗೆ ಸುಮಾರು 11 ಗಂಟೆ ಹೊತ್ತಿನಲ್ಲಿ ಜಿಲ್ಲಾ ಪೊಲೀಸ್ ಕಚೇರಿ ಆವರಣಕ್ಕೆ ಬಂದಿದ್ದಾರೆ. ಆದರೆ ಆಕೆಯನ್ನು ಹಿಂಬಾಲಿಸಿಕೊಂಡು ಬಂದ ಲೋಕನಾಥ್, ಚಾಕುವಿನಿಂದ ಮಮತಾ ಎದೆಭಾಗಕ್ಕೆ ಬಲವಾಗಿ ಇರಿದಿದ್ದಾನೆ. ಹೀಗಾಗಿ ಆ ಚಾಕು ಆಕೆಯ ಬೆನ್ನಿನಿಂದ ಹೊರಗೆ ಬಂದಿದೆ.

ತೀವ್ರ ರಕ್ತಸ್ರಾವವಾಗಿ ಒದ್ದಾಡುತ್ತಿದ್ದ ಮಮತಾಳನ್ನು ಸ್ಥಳದಲ್ಲೇ ಇದ್ದ ಪೊಲೀಸರು ಹಾಸನ ಜಿಲ್ಲಾಸ್ಪತ್ರೆಗೆ ದಾಖಲು ಮಾಡಿದರು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಆರೋಪಿಯನ್ನು ನಗರ ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ತಬ್ಬಲಿಗಳಾದ ಮಕ್ಕಳು: ಇವರ ಹಿರಿಯ ಪುತ್ರ ಪ್ರಥಮ ಪಿ.ಯು. ವಿದ್ಯಾರ್ಥಿಯಾಗಿದ್ದರೆ, ಕಿರಿಯ ಪುತ್ರ 8ನೇ ತರಗತಿ ವಿದ್ಯಾರ್ಥಿಯಾಗಿದ್ದಾನೆ.

ವರದಕ್ಷಿಣೆ, ಸೈಟ್‌ಗಾಗಿ ಜಗಳ: ಈ ಬಗ್ಗೆ ಮಮತಾ ತಂದೆ ಶಾಮಣ್ಣ ಹಾಗೂ ಮನೆಯವರು ಪ್ರತಿಕ್ರಿಯೆ ನೀಡಿದ್ದು, 'ವರದಕ್ಷಿಣೆ ಹಣ, ಸೈಟ್ ನೋಂದಣಿ ಮಾಡಿಸಿಕೊಡುವಂತೆ ಮಮತಾಗೆ ಲೋಕನಾಥ್ ಕಿರುಕುಳ ನೀಡುತ್ತಿದ್ದ, ದೈಹಿಕವಾಗಿ ಹಲ್ಲೆ ಕೂಡ ಮಾಡಿದ್ದ, ಆರಂಭದಲ್ಲೇ ಪೊಲೀಸ್ ಠಾಣೆಗೆ ದೂರು ನೀಡುವಂತೆ ಹೇಳಿದರೂ ಮರ್ಯಾದೆಗೆ ಅಂಜಿ ದೂರು ನೀಡಿರಲಿಲ್ಲ, ಕಳೆದ ಮೂರ್ನಾಲ್ಕು ದಿನಗಳಿಂದ ದಂಪತಿ ನಡುವೆ ಏನು ನಡೆದಿದೆಯೋ ಗೊತ್ತಿಲ್ಲ, ಇಂದು ಮಮತಾಳನ್ನು ಕೊಲೆ ಮಾಡಿದ್ದಾನೆ. ಆತನಿಗೆ ಕಠಿಣವಾದ ಶಿಕ್ಷೆ ನೀಡಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನ್ಯಾಯ ಸಂಹಿತೆಗೆ ತಿದ್ದುಪಡಿ: ಎಚ್‌ಕೆಪಿ

1ನೇ ಪುಟದಿಂದ ▶ ಇದು ಆಡಳಿತ ಹಾಗೂ ನ್ಯಾಯದಾನ ವ್ಯವಸ್ಥೆಯಲ್ಲಿ ಗೊಂದಲ, ಗೋಜಲು ಮಾತ್ರ ಸೃಷ್ಟಿಸುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು. 2023ರಲ್ಲಿ ಅಮಿತ್ ಶಾ ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆದು ಈ ಕಾನೂನುಗಳ ಕುರಿತು ಪರಿಶೀಲನೆ, ಸಲಹೆ ಸೂಚನೆ ಕೇಳಿದ್ದರು. ಆಗ ಸಿಎಂ ಸಿದ್ದರಾಮಯ್ಯ ನನಗೆ ಪತ್ರ ಬರೆದು ಈ ಕಾನೂನುಗಳ ಕುರಿತು ತಜ್ಞರ ಸಮಿತಿ ರಚನೆ ಮಾಡಿ ವರದಿ ನೀಡಲು ಸೂಚಿಸಿದ್ದರು. ಹೀಗಾಗಿ ನಾವು ತಜ್ಞರ ಸಮಿತಿ ವರದಿ ಹಾಗೂ ನನ್ನ ಅಭಿಪ್ರಾಯ ತಿಳಿಸಿ ಸಿಎಂಗೆ ಪತ್ರ ಕಳುಹಿಸಿದ್ದೆ. ಇದನ್ನು ಉಲ್ಲೇಖಿಸಿ ಅಮಿತ್ ಶಾಗೆ ಸಿದ್ದರಾಮಯ್ಯ ಪತ್ರ ಬರೆದು, ವರದಿಯನ್ನು ನೀಡಿದ್ದರು. ನಾವು ಆ ಸುದೀರ್ಘ ಪತ್ರದಲ್ಲಿ ಒಟ್ಟು 23 ಸಲಹೆಗಳನ್ನು ನೀಡಿದ್ದೆವು. ಆದರೆ ಕೇಂದ್ರ ಸರ್ಕಾರ ನಮ್ಮ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ, ನಮ್ಮ ಯಾವುದೇ ಅಭಿಪ್ರಾಯವನ್ನು ಅದರಲ್ಲಿ ಸೇರಿಸಿಲ್ಲ. ಈಗ ಮಂಡನೆ ಮಾಡಿದ ಮಸೂದೆಯನ್ನು ಯಥಾವತ್ತಾಗಿ ಜಾರಿ ಮಾಡಿದ್ದಾರೆ ಎಂದರು.

ಪೊಲೀಸ್ ಮಹಾ ನಿರ್ದೇಶಕರು ಇಂದಿನಿಂದಲೇ ಕಾನೂನು ಜಾರಿ ಮಾಡಲಾಗುವುದು ಎಂದು ಮಾಡಿರುವ ಟ್ವೀಟ್‌ಗೆ ಪ್ರತಿಕ್ರಿಯಿಸಿ, ಅವರು ಜಾರಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಕಾನೂನು-ಸಂಸದೀಯ ವ್ಯವಹಾರಗಳ ಸಚಿವನಾಗಿ ಕಾನೂನು ತಿದ್ದುಪಡಿ ಮಾಡುವ ಅವಕಾಶ ಇದೆ, ಮಾಡುತ್ತೇವೆ ಎನ್ನುತ್ತೇನೆ. ಸದ್ಯ ಈಗ ಹೊಸ ಕಾನೂನಿನ ಪ್ರಕಾರ ಎಫ್‌ಐಆರ್ ಆಗುತ್ತಿವೆ. ತಿದ್ದುಪಡಿ ಆದ ಬಳಿಕ ಅದನ್ನು ಪಾಲಿಸಬೇಕಾಗುತ್ತದೆ ಎಂದರು.

> ಸಿಎಂ, ಡಿಸಿಎಂ ವಿಚಾರ ಪತ್ರಿಕಾಗೋಷ್ಠಿಯಲ್ಲಿ ನಡೆಸುವ ಚರ್ಚಾ ಸಂಗತಿ ಅಲ್ಲ. ಇದರಿಂದ ಅನವಶ್ಯಕ ಗೊಂದಲ ಮಾತ್ರ ಸೃಷ್ಟಿಸಲು ಸಾಧ್ಯ.
>
> ● ಎಚ್.ಕೆ.ಪಾಟೀಲ್, ಸಚಿವ

ಯಾವುದಕ್ಕೆಲ್ಲ ತಿದ್ದುಪಡಿ?

- ಸರ್ಕಾರದ ಕ್ರಮಗಳನ್ನು ವಿರೋಧಿಸಿ ಉಪವಾಸ ಸತ್ಯಾಗ್ರಹ ಮಾಡುವುದು ಕೇಂದ್ರದ ಹೊಸ ಕಾನೂನಿನ ಪ್ರಕಾರ ಅಪರಾಧ. ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದು ಅಪರಾಧ ಅಲ್ಲ. ಇದು ದುರ್ದೈವದ ಸಂಗತಿ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಉಪವಾಸ ಸತ್ಯಾಗ್ರಹ ಬ್ರಿಟಿಷರ ವಿರುದ್ಧ ದೊಡ್ಡ ಅಸ್ತ್ರವಾಗಿತ್ತು. ಈ ನಿಟ್ಟಿನಲ್ಲಿ ಉಪವಾಸ ಸತ್ಯಾಗ್ರಹ ಅಪಾರಾಧ ಎಂಬ ಪ್ರಸ್ತಾಪಕ್ಕೆ ತಿದ್ದುಪಡಿ.
- ರಾಷ್ಟ್ರಪಿತ, ರಾಷ್ಟ್ರೀಯ ಲಾಂಛನ, ಬಾವುಟಕ್ಕೆ ಅಗೌರವ ತೋರಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ತಿದ್ದುಪಡಿ.
- ಸಂಘಟಿತ ಅಪರಾಧ ಎಂದು ಆರೋಪಿಸಿ, ವ್ಯಕ್ತಿಗಳ ಮೇಲೆ ಮೊಕದ್ದಮೆ ಹೂಡಲು ತನಿಖಾ ಸಂಸ್ಥೆಗಳಿಗೆ ಏಕಪಕ್ಷೀಯ ವಿವೇಚನಾಧಿಕಾರಕ್ಕೆ ತಿದ್ದುಪಡಿ.
- ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆ ತರುವ ಅಪರಾಧಗಳಿಗೆ ಕೇವಲ 3 ವರ್ಷ ಜೈಲು ಹಾಗೂ ದಂಡ ವಿಧಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಪ್ರಕರಣದಲ್ಲಿ ಕಠಿಣಾತಿ ಕಠಿಣ ಕ್ರಮ ಕೈಗೊಳ್ಳುವಂತೆ ತಿದ್ದುಪಡಿ.
- ಸೈಬರ್ ಅಪರಾಧ, ಹ್ಯಾಕಿಂಗ್, ಆರ್ಥಿಕ ಅಪರಾಧ, ಅಣ್ವಸ್ತ್ರ ಗೌಪ್ಯತೆ ಹಾಗೂ ತಂತ್ರಜ್ಞಾನ ಮೂಲಕ ವಿಧ್ವಂಸಕ ಕೃತ್ಯ ಎಸಗುವ ಅಪರಾಧಗಳಿಗೆ ಪ್ರತ್ಯೇಕ ಅಧ್ಯಾಯದ ಮೂಲಕ ಕ್ರಮಕ್ಕೆ ತಿದ್ದುಪಡಿ.
- ಮೃತ ದೇಹದ ಮೇಲೆ ಅತ್ಯಾಚಾರ ಎಸಗುವುದು, ಮೃತ ದೇಹಕ್ಕೆ ತೋರುವ ಅಗೌರವ ಅಕ್ಷಮ್ಯ ಅಪರಾಧ. ಇದನ್ನು ಅಪರಾಧೀಕರಣ ಗೊಳಿಸುವ ನಿಟ್ಟಿನಲ್ಲಿ ತಿದ್ದುಪಡಿ.
- ಹೊಸ ಕಾಯ್ದೆ ಅಡಿಯಲ್ಲಿ ಪೊಲೀಸ್ ಕಸ್ಟಡಿ ಅವಧಿಯನ್ನು 90 ದಿನಗಳವರೆಗೆ ವಿಸ್ತರಿಸುವುದಕ್ಕೆ ಅವಕಾಶ ಇದೆ. ಇದು ದೀರ್ಘಕಾಲದ ಅವಧಿಯಾಗುತ್ತದೆ. ಮೊದಲು 15 ದಿನ ಇತ್ತು. ಅವಧಿ ಕಡಿತಗೊಳಿಸಲು ತಿದ್ದುಪಡಿ.
- ಅಪರಾಧ ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳ ಆಸ್ತಿಪಾಸ್ತಿ ಜಪ್ತಿಗೆ ಮೊದಲು ಕೋರ್ಟ್ ಅನುಮತಿ ಬೇಕಾಗಿತ್ತು. ಆದರೆ ಹೊಸ ಕಾನೂನಿನಲ್ಲಿ ಪೊಲೀಸರಿಗೆ ಅನುಮತಿ ನೀಡಲಾಗಿದೆ. ಇದನ್ನು ತಿದ್ದುಪಡಿ ಮಾಡಲಾಗುತ್ತದೆ.

ನಾನು ಹಿಂದೂ ಎನ್ನುವವರಿಂದ ದ್ವೇಷ: ರಾಹುಲ್ ವಿವಾದ

1ನೇ ಪುಟದಿಂದ ▶ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಮೋದಿ ಆಕ್ಷೇಪಕ್ಕೆ ಪ್ರತ್ಯುತ್ತರ ನೀಡಿ, "ಬಿಜೆಪಿ, ಆರ್‌ಎಸ್‌ಎಸ್ ಅಥವಾ ಮೋದಿಯೇ ಇಡೀ ಹಿಂದೂ ಸಮುದಾಯವಲ್ಲ" ಎಂದರು.

"ಎಲ್ಲ ಧರ್ಮಗಳು ಮತ್ತು ನಮ್ಮ ಎಲ್ಲ ಹಿರಿಯರು ಅಹಿಂಸೆ ಮತ್ತು ನಿರ್ಭೀತಿ ಬಗ್ಗೆ ಹೇಳಿದ್ದಾರೆ. ಆದರೆ, ತಮ್ಮಷ್ಟಕ್ಕೆ ತಾವು ಹಿಂದೂಗಳೆಂದು ಹೇಳಿಕೊಳ್ಳುವವರು ಕೇವಲ ಹಿಂಸೆ, ದ್ವೇಷ ಮತ್ತು ಸುಳ್ಳು ಹಬ್ಬಿಸುವುದರಲ್ಲಿ ತೊಡಗಿರುತ್ತಾರೆ. ನೀವು ನೈಜ ಹಿಂದೂಗಳೇ ಅಲ್ಲ" ಎಂದು ಹೇಳುತ್ತಿದ್ದಂತೆ ಆಡಳಿತ ಪಕ್ಷದ ಎಲ್ಲ ಸದಸ್ಯರು ಎದ್ದು ನಿಂತು ಆಕ್ಷೇಪಿಸಿದರು.

ಕ್ಷಮೆಗೆ ಆಗ್ರಹಿಸಿದ ಅಮಿತ್ ಶಾ: ಹಿಂದೂಗಳೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಕೋಟ್ಯಂತರ ಜನರಿಗೆ ರಾಹುಲ್ ಗಾಂಧಿ ಅವಮಾನ ಮಾಡಿದ್ದಾರೆ. ಹಾಗಾಗಿ ಅವರು ಸದನ ಹಾಗೂ ಇಡೀ ದೇಶಕ್ಕೆ ಕ್ಷಮೆ ಕೋರಬೇಕೆಂದು ಆಗ್ರಹಿಸಿದರು. ಇದೇ ವೇಳೆ ಅವರು ತುರ್ತು ಪರಿಸ್ಥಿತಿ ಮತ್ತು 1984ರ ಸಿಖ್ ದಂಗೆ ಉಲ್ಲೇಖಿಸಿ ರಾಹುಲ್ ಗಾಂಧಿಗೆ ತಿರುಗೇಟು ನೀಡಿದರು.

ಸಂವಿಧಾನದ ಮೇಲೆ ಬಿಜೆಪಿ ದಾಳಿ-ರಾಹುಲ್: ಹಿಂದೂ, ಇಸ್ಲಾಮ್, ಕ್ರೈಸ್ತ, ಬೌದ್ಧ, ಜೈನ ಮತ್ತು ಸಿಖ್ ಸೇರಿ ಎಲ್ಲ ಧರ್ಮಗಳು ಧೈರ್ಯದ ಬಗ್ಗೆ ಹೇಳಿವೆ ಎಂದು ಹೇಳುವ ಮೂಲಕ ರಾಹುಲ್ ಅವರು ನಿರ್ಭೀತಿಯ ಮಹತ್ವವನ್ನು ಸಾರುವ ಪ್ರಯತ್ನ ಮಾಡಿದರು. ಅಲ್ಲದೇ, ಬಿಜೆಪಿಯು ನಿರಂತರವಾಗಿ ಸಂವಿಧಾನದ ಮೇಲೆ ದಾಳಿ ಮಾಡುತ್ತಿದೆ ಮತ್ತು ಭಾರತದ ಕಲ್ಪನೆಯನ್ನು ಹಾಳು ಮಾಡುತ್ತಿದೆ ಎಂದು ಹೇಳಿದರು.

ಮೋದಿ ಆದೇಶದ ಮೇರೆಗೆ ನನ್ನನ್ನು ಟಾರ್ಗೆಟ್ ಮಾಡಲಾಗುತ್ತಿದೆ. ನನ್ನ ವಿರುದ್ಧ 20ಕ್ಕೂ ಅಧಿಕ ಪ್ರಕರಣಗಳಿವೆ. ನನ್ನ ಮನೆಯನ್ನು ಕಿತ್ತುಕೊಳ್ಳಲಾಯಿತು, 55 ಗಂಟೆಗಳ ಕಾಲ ವಿಚಾರಣೆ ನಡೆಸಲಾಯಿತು ಎಂದು ವೇಳೆ ರಾಹುಲ್ ಹೇಳಿದರು. ನನ್ನ ಬಳಿಕ ಬಿಜೆಪಿಯವರೂ ಜೈ ಸಂವಿಧಾನ ಎಂದು ಹೇಳುತ್ತಿರುವುದು ಖುಷಿ ಕೊಡುತ್ತಿದೆ ಎಂದು ಹೇಳಿದರು.

ಶಿವ, ಜೀಸಸ್, ಗುರು ನಾನಕ್ ಫೋಟೋ ಪ್ರದರ್ಶಿಧ ರಾಹುಲ್: ರಾಹುಲ್ ಗಾಂಧಿ ತಮ್ಮ ಭಾಷಣದ ಮಧ್ಯೆ ಶಿವ, ಜೀಸಸ್, ಗುರು ನಾನಕ್ ಚಿತ್ರಗಳನ್ನು ಪ್ರದರ್ಶನ ಮಾಡಿದ್ದೂ ಗಲಾಟೆಗೆ ಕಾರಣವಾಯಿತು. ಹಿಂದೂ ಧರ್ಮ ದ್ವೇಷವನ್ನು ಹರಡುವುದಿಲ್ಲ; ಬಿಜೆಪಿಗರು ಮಾತ್ರ ಆ ಕೆಲಸ ಮಾಡುತ್ತಾರೆ ಎಂದು ಹೇಳಿದ ರಾಹುಲ್, ಈ ವೇಳೆ ವಿವಿಧ ಧರ್ಮಗಳ ಫೋಟೋಗಳನ್ನು ಪ್ರದರ್ಶಿಸಿದರು. ಇದೇ ವೇಳೆ ಅವರು ಕುರಾನ್‌ನಲ್ಲಿನ ವಾಕ್ಯ ಇದ್ದ ಭಿತ್ತಿ ಪತ್ರವನ್ನೂ ಪ್ರದರ್ಶಿಸಿದರು. ರಾಹುಲ್‌ರ ನಡೆಗೆ ಆಕ್ಷೇಪಿಸಿದ ಸ್ಪೀಕರ್ ಓಂ ಬಿರ್ಲಾ, ಸದನದಲ್ಲಿ ಭಿತ್ತಿ ಪತ್ರಗಳನ್ನು ಪ್ರದರ್ಶಿಸಲು ನಿಯಮದಲ್ಲಿ ಅವಕಾಶವಿಲ್ಲ ಎಂದು ಹೇಳಿದರು.

ರಾಹುಲ್ ಗಾಂಧಿ ವಿರುದ್ಧ ಸದನದ ಒಳಗೂ, ಹೊರಗೂ ಬಿಜೆಪಿ ಪ್ರತಿಭಟನೆ

ನವದೆಹಲಿ: ಹಿಂಸೆ ಹಾಗೂ ಕಂದಕ ಸೃಷ್ಟಿಸುವ ಆಡಳಿತ ಪಕ್ಷದವರು ಹಿಂದೂಗಳಲ್ಲ ಎಂಬ ರಾಹುಲ್ ಗಾಂಧಿ ಹೇಳಿಕೆಗೆ ಬಿಜೆಪಿ ಸದನದ ಒಳಗೂ ಮತ್ತು ಹೊರಗು ಪ್ರತಿಭಟನೆಯನ್ನು ನಡೆಸಿದೆ. ಇಡೀ ಹಿಂದು ಸಮುದಾಯವನ್ನು ಹಿಂಸೆಕೋರರು ಎಂದು ಹೇಳುವುದು ಗಂಭೀರ ಎಂದು ಮೋದಿ ಹೇಳಿದರೆ, ಅಮಿತ್ ಶಾ ಮತ್ತು ಇತರರ ಸಚಿವರು ರಾಹುಲ್‌ಗೆ ಕ್ಷಮೆಗೆ ಆಗ್ರಹಿಸಿದರು. ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ ಜಿ.ಕಿಶನ್‌ರೆಡ್ಡಿ ಕೃಷ್ಣಪಾಲ್ ಗುರ್ಜರ್ ಸೇರಿದಂತೆ ಅನೇಕ ನಾಯಕು ಟ್ವೀಟ್ ಮಾಡಿ, ರಾಹುಲ್ ವಿರುದ್ಧ ಹರಿಹಾಯ್ದಿದ್ದಾರೆ.

ರಾಹುಲ್ ಬೆಂಬಲಕ್ಕೆ ಧಾವಿಸಿದ ಪ್ರಿಯಾಂಕಾ

ನವದೆಹಲಿ: ರಾಹುಲ್ ಬೆಂಬಲಕ್ಕೆ ಧಾವಿಸಿರುವ ಪ್ರಿಯಾಂಕಾ ವಾದ್ರಾ ಅವರು, ರಾಹುಲ್ ಹಿಂದೂಗಳನ್ನು ಅವಮಾನಿಸಿಲ್ಲ ಬದಲಿಗೆ ಬಿಜೆಪಿ ಮತ್ತು ಅದರ ನಾಯಕರನ್ನು ಟೀಕಿಸಿದ್ದಾರೆ ಎಂದು ಹೇಳಿದ್ದಾರೆ. ರಾಹುಲ್ ಹಿಂದೂಗಳನ್ನು ಅವಮಾನಿಸಲು ಸಾಧ್ಯವೇ ಇಲ್ಲ, ಅವರು ಸ್ಪಷ್ಟವಾಗಿ ಬಿಜೆಪಿ,ಬಿಜೆಪಿ ನಾಯಕರ ಬಗ್ಗೆ ಮಾತನಾಡಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಹೇಳಿಕೆ ನಿಲ್ಲಿಸದಿದ್ದರೆ ಶೋಕಾಸ್ ನೋಟಿಸ್

1ನೇ ಪುಟದಿಂದ ▶ ಶಾಸಕ ಬಸವರಾಜ ಶಿವಗಂಗಾ ನೀವು ಸಿಎಂ ಆಗಬೇಕು ಅಂದಿದ್ದಾರೆ. ಸಚಿವ ಕೆ.ಎನ್.ರಾಜಣ್ಣ ಡಿಸಿಎಂ ಹುದ್ದೆಗಳ ಸೃಷ್ಟಿ ಬಗ್ಗೆ ಪದೇಪದೆ ಮಾತನಾಡುತ್ತಿದ್ದಾರೆ ಎಂದು ಕೇಳಿದಾಗ, ಶೀಘ್ರದಲ್ಲೇ ಕಾರಣ ಕೇಳಿ ನೋಟಿಸ್ ಜಾರಿ ಮಾಡುತ್ತಿದ್ದೇನೆ. ಯಾರ್‍ಯಾರಿಗೆ ನೋಟಿಸ್ ಜಾರಿಯಾಗುತ್ತದೆ ಎಂಬುದನ್ನು ನೋಡ್ತಾ ಇರಿ. ಆಮೇಲೆ ಅದರ ಬಗ್ಗೆ ಕೇಳಿ ಎನ್ನುವ ಮೂಲಕ ವಿವಾದಿತ ಹೇಳಿಕೆ ನೀಡುವವರಿಗೆ ಎಚ್ಚರಿಕೆ ನೀಡಿದರು.

ಕಾರ್ಯಕರ್ತರ ಸಭೆ ಶಾಸಕರ ಮನೆಯಲ್ಲಿ ನಡೆಯುವಂತಿಲ್ಲ: ಅಷ್ಟೇ ಅಲ್ಲ, ಸಚಿವರು ಸೇರಿದಂತೆ ಪಕ್ಷದ ಶಾಸಕರು ತಮ್ಮ ಮನೆಗಳಲ್ಲಿ ಕಾರ್ಯಕರ್ತರ ಸಭೆಗಳನ್ನು ನಡೆಸುವಂತಿಲ್ಲ, ಬೇಕಿದ್ದರೆ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಲಿ. ಆದರೆ ಕಾರ್ಯಕರ್ತರ ಸಭೆಗಳನ್ನು ಮಾತ್ರ ಕಡ್ಡಾಯವಾಗಿ ಪಕ್ಷದ ಕಚೇರಿಗಳಲ್ಲಿ ಮಾಡಬೇಕು. ಒಂದು ವೇಳೆ ಪಕ್ಷದ ಸಭಾಂಗಣ ಸಾಲದಿದ್ದರೆ, ಸಮುದಾಯ ಭವನ ಬಾಡಿಗೆ ತೆಗೆದುಕೊಂಡು ಅಲ್ಲಿ ಸಭೆಗಳನ್ನು ನಡೆಸಲಿ. ಈ ಸಂಬಂಧ ಪದಾಧಿಕಾರಿಗಳ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದರು. ಇದಕ್ಕೂ ಮುನ್ನ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಶಿವಕುಮಾರ್, ಸಿಎಂ-ಡಿಸಿಎಂ, ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ವದಂತಿಗೆಲ್ಲ ಕಿವಿಗೊಡಬೇಡಿ. ಅದರಲ್ಲಿ ಯಾವುದೇ ಹುರುಳಿಲ್ಲ, ಪಕ್ಷ ಸಂಘಟನೆ ಕಡೆಗೆ ಲಕ್ಷ್ಯವಹಿಸಿ. ಮುಂಬರುವ ಚುನಾವಣೆಗಳಲ್ಲಿ ನಿರೀಕ್ಷಿತ ಗೆಲುವು ಸಾಧಿಸಬೇಕು ಎಂದು ಸೂಚಿಸಿದರು ಎನ್ನಲಾಗಿದೆ.

ರಾಜ್ಯದ ರಾಷ್ಟ್ರೀಯ ಹೆದ್ದಾರಿಗೆ ಕೇಂದ್ರದಿಂದ ₹ 8021 ಕೋಟಿ

1ನೇ ಪುಟದಿಂದ ▶ ಒಟ್ಟು 19 ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಹೆದ್ದಾರಿ ಅಭಿವೃದ್ಧಿ ಫ್ಲೈಓವರ್, ಹೊಸ ಹೆದ್ದಾರಿ ನಿರ್ಮಾಣ ಇನ್ನಿತರ ಕಾಮಗಾರಿ ಇದರಲ್ಲಿ ಸೇರಿವೆ. ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹೆದ್ದಾರಿ ಅಭಿವೃದ್ಧಿ ಹಾಗೂ ಹೊಸ ಹೆದ್ದಾರಿ ನಿಟ್ಟಿನಲ್ಲಿ ರಾಷ್ಟ್ರಾದ್ಯಂತ ಅಂದಾಜು 93 ಸಾವಿರ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಉತ್ತರಪ್ರದೇಶ, ಮಹಾರಾಷ್ಟ್ರ ನಂತರದಲ್ಲಿ ಅತಿ ಹೆಚ್ಚಿನ ಅನುದಾನ ಪಡೆದ ರಾಜ್ಯ ಕರ್ನಾಟಕವಾಗಿದೆ.

ಎಲ್ಲೆಲ್ಲಿ, ಎಷ್ಟು ಅನುದಾನ?: ಮೂಡಿಗೆರೆ-ಚಿತ್ರದುರ್ಗ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ-173ರಲ್ಲಿ ಚಿಕ್ಕಮಗಳೂರು ಪಟ್ಟಣಕ್ಕೆ ಬೈಪಾಸ್ ಕಲ್ಪಿಸುವ 19 ಕಿಮೀ ಉದ್ದದ ರಸ್ತೆಗೆ ಅಂದಾಜು 400 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. ಹೊನ್ನಾವರ-ಚಿತ್ತೂರು ರಾಷ್ಟ್ರೀಯ ಹೆದ್ದಾರಿ 69ರಲ್ಲಿ ಚೂರಿಕಟ್ಟೆಯಿಂದ ಸಾಗರವರೆಗೆ, ಹಾಗೂ ಸಾಗರದಿಂದ-ಆನಂದಪುರವರೆಗೆ-32ಕಿಮೀ (400 ಕೋಟಿ), ಮಲಗಟ್ಟೆ-ಕಾರ್ಕಳ ರಾಷ್ಟ್ರೀಯ ಹೆದ್ದಾರಿ 169ರಲ್ಲಿ ಮಾಲಗೇಟ್-ಕಾರ್ಕಳ-29ಕಿಮೀ (438ಕೋಟಿ), ಮಂಗಳೂರು-ತುಮಕೂರು ರಾಷ್ಟ್ರೀಯ ಹೆದ್ದಾರಿ 73ರಲ್ಲಿ ಚಾರ್ಮಾಡಿ ಘಾಟ್-13ಕಿಮೀ (260 ಕೋಟಿ).

ಮಲ್ಪೆ-ತೀರ್ಥಹಳ್ಳಿ ರಾಷ್ಟ್ರೀಯ ಹೆದ್ದಾರಿ 169ಎ ಆಗುಂಬೆ ಘಾಟ್-20 ಕಿಮೀ (403 ಕೋಟಿ), ಜೇವರ್ಗಿ-ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ150ಎನಲ್ಲಿ 52ರಿಂದ 89.3 ಕಿಮೀವರೆಗೆ ಒಟ್ಟು 37ಕಿಮೀ (450 ಕೋಟಿ), ಜೇವರ್ಗಿ-ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ150ಎನಲ್ಲಿ 89.3ರಿಂದ 112 ಕಿಮೀವರೆಗೆ ಒಟ್ಟು 23 ಕಿಮೀ (272 ಕೋಟಿ), ರಾಣೆಬೆನ್ನೂರು-ಬೈಂದೂರು ರಾಷ್ಟ್ರೀಯ ಹೆದ್ದಾರಿ 766ಸಿ ನಲ್ಲಿ 56 ಕಿಮೀ (900 ಕೋಟಿ), ಸಾಗರ-ಮರಕುಟುಕ ರಾಷ್ಟ್ರೀಯ ಹೆದ್ದಾರಿ369ಇನಲ್ಲಿ 62ಕಿಮೀ (920 ಕೋಟಿ), ಮಂಗಳೂರು-ತುಮಕೂರು ರಾಷ್ಟ್ರೀಯ ಹೆದ್ದಾರಿ 73ರಲ್ಲಿ ಬಾಣಾವರದಿಂದ ಮೂಡಿಗೆರೆ ಹ್ಯಾಂಡ್ ಪೋಸ್ಟ್‌ವರೆಗೆ 81ಕಿಮೀ (1,213 ಕೋಟಿ), ಚಿಕ್ಕಮಗಳೂರು-ಬಿಳಿಕೆರೆ ರಾಷ್ಟ್ರೀಯ ಹೆದ್ದಾರಿ 373ರಲ್ಲಿ ಅರ್ಜುನಹಳ್ಳಿಯಿಂದ ಬಿಳಿಕೆರೆವರೆಗೆ 24 ಕಿಮೀ (500 ಕೋಟಿ), ಕಲಬುರಗಿ-ದೇವಸುಗೂರು ರಾಷ್ಟ್ರೀಯ ಹೆದ್ದಾರಿ150ರಲ್ಲಿ ಮಾಣಿಕನಗರ ದೊಡ್ಡ ಸೇತುವೆ ಮರುನಿರ್ಮಾಣ (15 ಕೋಟಿ), ಕಲಬುರಗಿ-ದೇವಸುಗೂರು ರಾಷ್ಟ್ರೀಯ ಹೆದ್ದಾರಿ150ರಲ್ಲಿ ವಾಡಿಯಲ್ಲಿ ಕೆಳ ಸೇತುವೆ ಬದಲಾಗಿ ಮೇಲ್ಸೇತುವೆ 2 ಕಿಮೀ (150 ಕೋಟಿ).

ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ವಿವಿಧ ರಕ್ಷಣಾ ಕಾಮಗಾರಿಗಳು 2 ಕಿಮೀ (90 ಕೋಟಿ), ಜೇವರ್ಗಿ-ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ 150ಎನಲ್ಲಿ ಫ್ಲೈಓವರ್ ನಿರ್ಮಾಣ 6 ಕಿಮೀ (100 ಕೋಟಿ), ರಾಷ್ಟ್ರೀಯ ಹೆದ್ದಾರಿ52ರಲ್ಲಿ ನವಲಗುಂದ ಪಟ್ಟಣಕ್ಕೆ ಬೈಪಾಸ್ 12 ಕಿಮೀ (350 ಕೋಟಿ), ರಾಜ್ಯದ ಏಳು ಕಡೆಗಳಲ್ಲಿ ಸುರಕ್ಷಾ ಕಾಮಗಾರಿಗಳಿಗಾಗಿ (100 ಕೋಟಿ), ರಾಷ್ಟ್ರೀಯ ಹೆದ್ದಾರಿ69ರಲ್ಲಿ ಬೈರನಹಳ್ಳಿಗೆ ಸಿರಾದಲ್ಲಿ 4ಎಲ್ ಪ್ಲಸ್ ಪಿಎಸ್52 ಕಿಮೀ (1,000 ಕೋಟಿ) ಅಂದಾಜು ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತದೆ. ರಾಜ್ಯದಲ್ಲಿನ ಸುಮಾರು 459 ಕಿಮೀ ಉದ್ದದಲ್ಲಿ ಹೊಸದಾಗಿ ರಾಷ್ಟ್ರೀಯ ಹೆದ್ದಾರಿ ಯೋಜನೆ ನಿರ್ಮಾಣ ಹಾಗೂ ಫ್ಲೈಓವರ್ ನಿರ್ಮಾಣಕ್ಕೆ ಯೋಜನಾ ಕಾರ್ಯಸಾಧ್ಯತೆ ವರದಿ ತಯಾರಿಕೆಗೆ 15 ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ ಪ್ರಧಾನಿ ಮೋದಿ ಹಾಗೂ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ಕೇಂದ್ರ ಸಚಿವ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

PUBLIC NOTICE

It is brought to the notice of General Public that our Client is intending to purchase immovable property bearing New Municipal No.23/7, (earlier Portion of Property No.23), situated at G.No.9th Street, Jogupalya, Halasuru, B'lore–08, measuring E-W: On the Northern side – 43.6 ft, and On the Southern side 41.3 ft, and North to South : 30 ft, in all 1273.5 Sq.ft, bounded on East by: 8 ft, Common Passage, West by : Private Property, North by : Property gifted to Sri.R.Somanath Gowda (Portion of Property No.23), South by : Property gifted to Sri.R.Mohan Kumar (Portion of Property No.23), from its owners **1. SMT. SUMATHI JAGANATH,** W/of Late Sri. Jaganath Gowda & 2) **SMT. SUHASINI GOWDA,** D/of Late Sri. Jaganath Gowda, #22, G No. 10th Street, Halasuru, H.A.L II Stage, B'lore. Any person/s having objections to the said transactions can register their claim/s with documentary evidence with the undersigned within 7 days of publication hereof, failing which, our client will proceed with the transactions and any claim/s received thereafter will not be entertained.

H.V.NAVEEN KUMAR RAO &
H.V.SUNIL KUMAR RAO
ADVOCATES
No. 57, 1st Floor, Veerapillai Street,
Bengaluru-01.
Mob : 9341380225

IN THE HON'BLE COURT OF SENIOR CIVIL JUDGE AT ANEKAL
IA NO. OF 2024 IN O.S.NO.635/2015
BETWEEN: Sri. Venkataswamy Reddy
Since Deceased by Lrs., ...Plaintiff
AND: Sri. Thimmaiah
Since Deceased by Lrs., ...Defendant
SUMMONS TO PROPOSED DEFENDANT NOS. 38(d), 46, 47, 55, 56, 57, 59 & 61:

38(d). Smt. Swathi, Aged about 32 years, D/o. Late Venkatesh No.354, 9th Main Road, Dollars Colony, JP Nagar 4th Phase, Bangalore-560078.
46. Mr. Thankaswamy Ponnu Nadar, Aged about 73 years, S/o.Sri. Ponnu Nadar, Residing at No. Flat No.BF4, Ittina Sarva Apartments-1, Hongasandra, Begur Road Bommanahalli, Bangalore-560068.
47. Mrs. Hemalatha. N.B, Aged about 53 Years, W/o Late.K.Ramachandre Gowda, Residing at #164, Kuvempu Road, Abbenahalli, Madivala, Malur Taluk, Kolar-563130
55. Mrs. Mangeshwaramma, Aged about 46 years, W/o Aneel Kumar Cheekati, Residing at # No.104, Saipriya Nivas, 13th Cross, Neeladri Nagar, Electronic City, Bangalore-560100.
56. Mr. Neragayapalem Ramanaiah, Aged about 41 years, S/o.Late Kotaiah, Residing at No.2-92, Mittameedipalle, Peda Kandukur, Prakasam, Andhrapradesh-523336
57. Mr.V.N.Seshagiri Rao Bhavana, Aged about 44 years, S/o Subbarao Bhavana Residing at # No. Y30, Concord Silicon Valley, Near Wipro Gate No.16, Electronic City Phase-1, Doddathogur, Bangalore-560100.
59. Mrs. Bagam Anjali, Aged about 35 years, D/o. Mohan Rao, Residing at No.3-7/1, Patha Anjanapuram, Singabhupalem, Khammam, Andhra Pradesh-507120.
61. Mr. Vinod Varma, Aged about 40 years, S/o. Ram Avtar Verma, Residing at #B.J-75, West Shalimar Bagh, Shalimar Bagh S.O, North West Delhi. Delhi-1100887.

Whereas the above named Plaintiff has instituted Original Suit seeking for partition and such other reliefs as against the Proposed Defendants Notice is hereby given to you to appear before the Hon'ble Senior Civil Judge at Anekal, either in person or through a pleader on **18-07-2024 at 11.00 a.m.**, to answer the same, failing which the suit will be heard and determined ex- parte.

Given under my hand and seal of this Hon'ble Court **on this 25th Day of April 2024.**

By order of the Court, Chief Ministerial Officer Senior Civil Judge & J.M.F.C. Anekal,

Address of Advocate
R.CHANDRASHEKAR,
Law Park Associates, No. 13 & 14,
Ground Floor, Gold Tower,
Residency Road, Bangalore-560025.

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: 17-MYS 2024-25
ದಿನಾಂಕ: 24.06.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಸ್ವಯಂಚಾಲಿತ ಆಕ್ಸಲ್ ಬಾಕ್ಸ್ ಉಷ್ಣತಾ ರೆಕಾರ್ಡಿಂಗ್ ವ್ಯವಸ್ಥೆ. (ಟೆಂಡರು ಸಂ. L9245710A)	ರೂ. 62,25,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.07.2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಿರಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು
ಮೈಸೂರು
PUB/195/AAF/PRB/SWR/2024-25
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: Y/E.29/2024-25/23
ದಿನಾಂಕ: 21.06.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಚಿಕ್ಕಜಾಜೂರು – ರಾಯದುರ್ಗ ವಿಭಾಗದಲ್ಲಿ 2 ವರ್ಷಗಳ ಅವಧಿಗೆ ಓಹೆಚ್‌ಇ & ಪಿಎಸ್‌ಐ ಚಟುವಟಿಕೆಗಳ ಹೊರಗುತ್ತಿಗೆ.	ರೂ. 3,06,45,732.43

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.07.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್
ಮೈಸೂರು
PUB/193/AAF/PRB/SWR/2024-25
South Western Railway - SWR | SWRRLY | SWRRLY

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ವಿಭಾಗ ರವರ ಕಛೇರಿ, ರಾಜರಾಜೇಶ್ವರಿ ನಗರ,
ಕೊಠಡಿ ಸಂ.101, ಅನೆಕ್ಸ್-3 ಕಟ್ಟಡ, ಬೃಬೆಂಮಪಾ ನರಸಿಂಹರಾಜ ಚೌಕ, ಬೆಂಗಳೂರು-02

ಸಂ. ಕಾಅ(ಕ್ಯೂಎ/ಕ್ಯೂಸಿ)/ರಾರಾನ/ಟೆಂಡರ್/23/24-25 ದಿನಾಂಕ : 01-07-2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ) ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗವು ಕಾರ್ಯಪಾಲಕ ಅಭಿಯಂತರರು ಕ್ಯೂಎ/ಕ್ಯೂಸಿ, ರಾಜರಾಜೇಶ್ವರಿ ನಗರ ವಲಯ, ಬೃಬೆಂಮಪಾ ಇವರಿಂದ ಕೆಳಕಂಡ ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣವನ್ನು ಒಳಗೊಂಡಂತೆ ಯೋಜನಾ ನಿರ್ವಹಣೆಯ ಸಮಾಲೋಚನಾ ಸೇವೆಗಳಿಗಾಗಿ ಇಂತಹುದೇ ಕಾಮಗಾರಿಯನ್ನು ನಿರ್ವಹಿಸಿದಂತಹ ಆಸಕ್ತಿಯುಳ್ಳ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಕ್ರ	ಕಾಮಗಾರಿಯ ಹೆಸರು
1	"ರಾಜರಾಜೇಶ್ವರಿ ನಗರ ವಲಯದ ಲಗ್ಗೆರೆ ವಾರ್ಡ್‌ನ ಸ್ವಾತಂತ್ರ್ಯ ಹೋರಾಟಗಾರರ ಕಾಲೋನಿಯಲ್ಲಿ ಚೈನೇಜ್ 3650.00 ರಿಂದ 3800.00ಮೀ ವರೆಗೆ ವೃಷಭಾವತಿ ವ್ಯಾಲಿ ವಿ-200ಗೆ ಮತ್ತು ಗಟಾರದ ಪಕ್ಕದಲ್ಲಿನ ಸರ್ವೀಸ್ ರಸ್ತೆಗೆ ಆರ್‌ಸಿಸಿ ರೀಟೇನಿಂಗ್ ಗೋಡೆಯ ನಿರ್ಮಾಣ"ಕ್ಕಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣವನ್ನು ಒಳಗೊಂಡಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಇಎಂಡಿ ಮೊತ್ತ** : ರೂ.25,000/-

(1) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ನ ಗುತ್ತಿಗೆದಾರರಿಗೆ ಲಾಗ್‌ಇನ್ ಅಡಿಯಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು. (2) ಇ-ಪೋರ್ಟಲ್‌ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಬಹುದಾದ ದಿನಾಂಕ : **05-07-2024** (3) ಬಿಡ್-ಪೂರ್ವ ಸಭೆ : **10-07-2024 ರಂದು ಬೆಳಿಗ್ಗೆ 11.00 ಗಂಟೆಗೆ.** ಸ್ಥಳ : ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ವಿಭಾಗ ರವರ ಕಛೇರಿ, ರಾಜರಾಜೇಶ್ವರಿ ನಗರ, ಕೊಠಡಿ ಸಂ.101, ಅನೆಕ್ಸ್-3 ಕಟ್ಟಡ, ಬೃಬೆಂಮಪಾ ನರಸಿಂಹರಾಜ ಚೌಕ, ಬೆಂಗಳೂರು-02 (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **15-07-2024 ರಂದು ಸಂಜೆ 4:00 ಗಂಟೆಯವರೆಗೆ** (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **18-07-2024 ರಂದು ಸಂಜೆ 4:30 ಗಂಟೆಗೆ** (6) ಟೆಂಡರ್‌ನ ಮಾನ್ಯತೆ : ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕದಿಂದ 90 ದಿನಗಳು

ಸಹಿ/- ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ವಿಭಾಗ, ರಾಜರಾಜೇಶ್ವರಿ ನಗರ ವಲಯ

ಕರ್ನಾಟಕ ಸರ್ಕಾರ
ಉಪನಿರ್ದೇಶಕರ ಕಛೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಡಾ.ಎಂ. ಹೆಚ್. ಮರೀಗೌಡ ರಸ್ತೆ, (ಹೊಸೂರು ರಸ್ತೆ), ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು-29, e-mail: dwcd.dd@gmail.com ದೂರವಾಣಿ ಸಂಖ್ಯೆ: 080-29578688.

ಸಂಖ್ಯೆ: ಉನಿ/ಬೆಂನ/ವಾಸೇ/157/2024-25(ಭಾಗ-1)/332 ದಿನಾಂಕ: 01.07.2024

ಪ್ರಕಟಣೆ

2024-25ನೇ ಸಾಲಿಗೆ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಹಾಗೂ ಜಿಲ್ಲಾ ವ್ಯಾಪ್ತಿಯಡಿ ಬರುವ ಅಧೀನ ಕಛೇರಿಗಳಿಗೆ ನೌಕರರನ್ನು ಬಾಹ್ಯಮೂಲದ ಸೇವೆಯ ಮೂಲಕ ಪಡೆಯಲು ಒಂದು ವರ್ಷದ ಅವಧಿಗೆ ಅರ್ಹ ಏಜೆನ್ಸಿಗಳಿಂದ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಇ-ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ಅಂತಿಮ ದಿನಾಂಕ: 13.07.2024 ಸಂಜೆ 4.30 ಗಂಟೆಯಾಗಿದ್ದು ತಾಂತ್ರಿಕ ಬಿಡ್‌ನ್ನು ದಿನಾಂಕ: 15.07.2024ರ ಬೆಳಿಗ್ಗೆ 11.00 ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 17.07.2024 ಬೆಳಿಗ್ಗೆ 11.00ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: http:/kppp.karnataka.gov.in ಅಥವಾ ದೂರವಾಣಿ ಸಂಖ್ಯೆ: 080-29578688 ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/-
ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು ನಗರ ಜಿಲ್ಲೆ

DIPR/CP/709/Zen/2024-25

ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾಯೋಜನಾಧಿಕಾರಿಗಳ ಕಚೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಚಿತ್ರದುರ್ಗ.

ಸಂಖ್ಯೆ:ಸ.ಶಿ.ಕ/ಕೆಜಿಬಿವಿ-ಟೈಪ್-1,4/ಅ.ಪೊ/ಸಿ.ಆರ್-07/2024-25 ದಿ:29.06.2024

ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ

2024-25 ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ & ಮೊಳಕಾಲ್ಮೂರು ತಾಲ್ಲೂಕಿನ ಕಸ್ತೂರ ಬಾ ಗಾಂಧಿ ಬಾಲಿಕಾ ವಸತಿ ಶಾಲೆ/ನಿಲಯ(ಕೆ.ಜಿ.ಬಿ.ವಿ ಟೈಪ್-1, ಕೆ.ಜಿ.ಬಿ.ವಿ ಟೈಪ್-4)ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ 450 ಮಕ್ಕಳಿಗೆ ಖಾಸಗಿ ಸಂಸ್ಥೆಗಳ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಆಹಾರ ಪೂರೈಕೆ ಮಾಡಲು ಈ ಕೆಳಕಂಡಂತೆ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಕರ್ನಾಟಕ ಸರ್ಕಾರದ KPPP ವೆಬ್‌ಸೈಬ್ ಸೈಟ್ : http://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ವಿವರಗಳು, ವೇಳಾಪಟ್ಟಿ ಮತ್ತು Ref.No:SSK/2024-25/SE0115/Call-2 (1) ಊಟೋಪಹಾರ ಗುತ್ತಿಗೆ ಒದಗಿಸಬೇಕಾದ ಅವಧಿ:- ಕಾರ್ಯಾದೇಶ ನೀಡಿದ ದಿನಾಂಕದಿಂದ ದಿನಾಂಕ: 31/5/2025 (2024-25ರ ವರೆಗೆ) (2) ಟೆಂಡರ್ ಮೊತ್ತ:- ರೂ. 84,15,000/- (3) ಇಎಂಡಿ ಮೊತ್ತ (ಟೆಂಡರ್ ಮೊತ್ತದ ಶೇ. 2 ರಷ್ಟು):- ರೂ. 1,68,300/- (4) ಇ-ಟೆಂಡರ್ ಪ್ರಕಟಣೆ ದಿನಾಂಕ: 29.06.2024 (5) ಇ-ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:- 06.07.2024 (6) ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ:- 09.07.2024 (7) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:- 12.07.2024 ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 874712806 ಮತ್ತು 7483812237 ಇವರನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ.

DIPR/CTA/KSMCA/84/2024-25
ಸಹಿ/- ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಚಿತ್ರದುರ್ಗ.

ಇಸರೋ isro
ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ, ಯು.ಆರ್. ರಾವ್ ಸ್ಯಾಟಲೈಟ್ ಕೇಂದ್ರ
ನಿರ್ಮಾಣ ಮತ್ತು ನಿರ್ವಹಣಾ ಸಮೂಹ
ಹೆಚ್‌ಎಎಲ್ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು-560 017 (ದೂರವಾಣಿ: 080 25084177, 4184, 4156)
ತಿದ್ದುಪಡಿ-II ಪ್ರಕಟಣೆ

ವಿವರಣೆ	ವಿವರ		
ಕೆಲಸದ ಹೆಸರು	ಐಎಸ್‌ಐಟಿಇ ಕ್ಯಾಂಪಸ್, ಯುಆರ್‌ಎಸ್‌ಸಿ, ಮಾರತಹಳ್ಳಿ, ಬೆಂಗಳೂರು-560037ನಲ್ಲಿರುವ ಎಂಎಸ್‌ಎ ಕಟ್ಟಡದಲ್ಲಿ 3ಡಿ ಮೆಟಲ್ ಪ್ರಿಂಟರ್ ಸ್ಥಾಪನೆಗೆ ಪ್ರಸ್ತಾವಿತ ಸಿವಿಲ್ ಕಾಮಗಾರಿಗಳು	ಐಎಸ್‌ಐಟಿಇ ಕ್ಯಾಂಪಸ್ ಯುಆರ್‌ಎಸ್‌ಸಿ, ಮಾರತಹಳ್ಳಿ, ಬೆಂಗಳೂರು-560037 ನಲ್ಲಿ ವಿವಿಧ ಪ್ರದೇಶಗಳಲ್ಲಿ ಪ್ರಸ್ತಾವಿತ ಸಿವಿಲ್ ಕಾಮಗಾರಿಗಳು	ಮುಖ್ಯ ಕ್ಯಾಂಪಸ್, ಯುಆರ್‌ಎಸ್‌ಸಿ ಬೆಂಗಳೂರು-ನಲ್ಲಿ ಕ್ಲೀನ್ ರೂಮ್-2 ಮತ್ತು 3ರ ಪುನರ್ನಿರ್ಮಾಣ (ನಾಗರೀಕ ಕೆಲಸಗಳು)
ಇ-ಟೆಂಡರ್ ನೋಟಿಸ್ ಪ್ರಕಟಣೆ	ಯುಆರ್‌ಎಸ್‌ಸಿ/ಸಿ ಮತ್ತು ಎಂಜ/ಸಿ/ಟಿಎನ್/ 05/2024-2025 ದಿ: 27.05.2024	ಯುಆರ್‌ಎಸ್‌ಸಿ/ಸಿ ಮತ್ತು ಎಂಜ/ಸಿ/ಟಿಎನ್/ 07/2024-2025 ದಿ: 27.05.2024	ಯುಆರ್‌ಎಸ್‌ಸಿ/ಸಿ&ಎಂಜ/2ಸಿ/2024-25 ದಿನಾಂಕ: 13.05.2024
ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ	ರೂ. 6.80 ಲಕ್ಷಗಳು	ರೂ. 13.80 ಲಕ್ಷಗಳು	ರೂ. 94.00 ಲಕ್ಷ
ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ	08.07.2024 ರಂದು 10.30 ಗಂಟೆಯವರೆಗೆ ವಿಸ್ತರಿಸಲಾಗಿದೆ		
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	11.07.2024 ರಂದು 14:30 ಗಂಟೆಯವರೆಗೆ		
ಟೆಂಡರ್‌ಗಳನ್ನು ತೆರೆಯುವ ಅಂತಿಮ ದಿನಾಂಕ ಮತ್ತು ಸಮಯ	11.07.2024 ರ 14:30 ಗಂಟೆಯ ನಂತರ		

2. ಆಸಕ್ತ ಟೆಂಡರುದಾರರು ಇ-ಟೆಂಡರ್ ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/-
ಸಮೂಹ ನಿರ್ದೇಶಕರು (ನಿರ್ಮಾಣ ಮತ್ತು ನಿರ್ವಹಣಾ ಸಮೂಹ)

ICICI Home Finance
ಕಾರ್ಪೊರೇಟ್ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ-400059, ಭಾರತ.
ಶಾಖಾ ಕಚೇರಿ: 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯ ರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560 066

ಖಾಸಗಿ ಒಪ್ಪಂದದ ಮೂಲಕ ಸ್ಥಿರ ಸ್ವತ್ತುಗಳ ಮಾರಾಟಕ್ಕಾಗಿ ನೋಟೀಸು

ಹಣಕಾಸು ಸ್ವತ್ತುಗಳ ಭದ್ರತೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯ್ದೆ 2002ರ ಅನುಷ್ಠಾನದ ಅಡಿಯಲ್ಲಿ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ಓದಲಾದ ನಿಯಮ 8 (8)ರೊಂದಿಗೆ ಓದಲಾದ ನಿಯಮ 9(1)ರ ಪ್ರಕಾರ ಸ್ಥಿರ ಸ್ವತ್ತುಗಳ ಮಾರಾಟಕ್ಕಾಗಿ ಮಾರಾಟದ ನೋಟೀಸು.

ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ (ಐಸಿಐಸಿಐ ಎಚ್‌ಎಫ್‌ಸಿ) ಕೆಳಗೆ ನಮೂದಿಸಲಾದ ಅಡಮಾನದ ಆಸ್ತಿಯ ಮಾರಾಟಕ್ಕಾಗಿ ಹಲವಾರು-ಹರಾಜುಗಳನ್ನು ನಡೆಸಿತು. ಆದಾಗ್ಯೂ, ಅಂತಹ ಎಲ್ಲಾ ಇ-ಹರಾಜುಗಳು ವಿಫಲವಾಗಿವೆ. ಈಗ, ಒಬ್ಬ ಆಸಕ್ತ ಖರೀದಿದಾರರು **ರೂ.19,90,170/-**ಗೆ ಈ ಆಸ್ತಿಯನ್ನು ಖರೀದಿಸುವ ಪ್ರಸ್ತಾಪದೊಂದಿಗೆ ಐಸಿಐಸಿಐ ಎಚ್‌ಎಫ್‌ಸಿಯನ್ನು ಸಂಪರ್ಕಿಸಿದ್ದಾರೆ. ಈ ನೋಟೀಸಿನ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಖಾತರಿದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಸಾಲಗಾರರು/ಖಾತರಿದಾರರು ಸಂರಕ್ಷಿತ ಸಾಲದಾತರಿಗೆ ಅಡಮಾನಕ್ಕೆ /ಹೊಣೆಗಾರಿಕೆಗೆ ನೀಡಿದ್ದಾರೆ. ಪ್ರಸಕ್ತ ಅದು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರ **ಭೌತಿಕ ಸ್ವಾಧೀನದಲ್ಲಿದ್ದು** , ಅದನ್ನು "ಹೇಗಿದೆಯೋ ಹಾಗೆ" "ಎಲ್ಲಿದೆಯೋ ಅಲ್ಲಿ", "ಯಥಾಸ್ಥಿತಿಯಲ್ಲಿ" ಈ ಕೆಳಗೆ ನೀಡಿರುವ ಸಂಕ್ಷಿಪ್ತ ವಿವರಣೆಗಳ ಪ್ರಕಾರ ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲಗಾರ(ರು)/ಸಹ ಸಾಲಗಾರರು/ ಜಾಮೀನುದಾರರು/ ಕಾನೂನು ಉತ್ತರಾಧಿಕಾರಿಗಳ ಹೆಸರು/ ಸಾಲ ಖಾತೆ ಸಂಖ್ಯೆ.	ಸಂರಕ್ಷಿತ ಆಸ್ತಿ(ಗಳ) ವಿವರಗಳು ತಿಳಿದಿರುವ ಹೊರೆಗಳೊಂದಿಗೆ, ಯಾವುದಾದರೂ ಇದ್ದರೆ.	ಬಾಕಿ ಮೊತ್ತ	ಕಾದಿರಿಸಿದ ಬೆಲೆ / ಮುಂಗಡ ಹಣ ಠೇವಣಿ	ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಸುಜಾತಾ(ಸಾಲಗಾರ) ಬಾಲಗಂಗಾಧರ ಸ್ವಾಮಿ (ಸಹ ಸಾಲಗಾರ) ಸಾಲ ಖಾತೆ ಸಂಖ್ಯೆ. LHBWQ00001363100	ಸೆಟ್ ನಂ. 20, ಶ್ರೀ ಗುರು ದತ್ತಾತ್ರೇಯ ಎನ್‌ಕ್ಲೇವ್, ಸೈ. ನಂ. 45/1, ಬೈರೆಗೌಡನಹಳ್ಳಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು - 562160	ರೂ. 30,19,816/- ಜೂನ್ 25, 2024	ರೂ. 19,90,170/- ರೂ. 1,99,020/-	ಜುಲೈ 08, 2024ರಂದು ಪೂರ್ವಾಹ್ನ 11:00 - ಅಪರಾಹ್ನ 03:00	ಜುಲೈ 19, 2024 ರಂದು ಅಪರಾಹ್ನ 02:00 - 03:00

ಆನ್‌ಲೈನ್ ಹರಾಜನ್ನು ನಮ್ಮ ಹರಾಜು ಏಜೆನ್ಸಿ **GlobeTech**ನ ವೆಬ್‌ಸೈಟ್‌ನಲ್ಲಿ (**URL Link-/ https://BestAuctionDeal.com**) ನಡೆಸಲಾಗುವುದು. ನಿರೀಕ್ಷಿತ ಬಿಡ್‌ದಾರ(ರು) ಮುಂಗಡ ಹಣ ಠೇವಣಿ (ಇಎಂಡಿ) ಆರಟಿಜಿಸಿ/ ಡಿಮಾಂಡ್ ಡ್ರಾಫ್ಟ್ (ಡಿಡಿ)ನ್ನು (ಕಾಲಮ್ ಇ ನೋಡಿ) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯ ರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560 066-** ಇಲ್ಲಿ **ಜುಲೈ 18, 2024ರಂದು ಅಪರಾಹ್ನ 04:00**ರೊಳಗೆ ಅಥವಾ ಅದಕ್ಕೂ ಮೊದಲು ಮೊದಲು ಸಲ್ಲಿಸತಕ್ಕದ್ದು. ನಿರೀಕ್ಷಿತ ಬಿಡ್‌ದಾರ(ರು) ನೋಂದಣಿ ಫಾರ್ಮ್ ಮತ್ತು ಬಿಡ್ ನಿಯಮಗಳು ಮತ್ತು ಷರತ್ತುಗಳ ಫಾರ್ಮ್‌ನ ಸಹಿಮಾಡಿದ ಪ್ರತಿಯನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560 066-** ಇಲ್ಲಿ **ಜುಲೈ 18, 2024ರಂದು ಅಪರಾಹ್ನ 05.00**ರೊಳಗೆ ಅಥವಾ ಅದಕ್ಕೂ ಮೊದಲು ಸಲ್ಲಿಸತಕ್ಕದ್ದು . ಮುಂಗಡ ಹಣ ಠೇವಣಿ ಡಿಮಾಂಡ್ ಡ್ರಾಫ್ಟ್ (ಡಿಡಿ) **"ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು"** ಪರವಾಗಿ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ಪಡೆದಿದ್ದು **ಬೆಂಗಳೂರಿನಲ್ಲಿ** ಪಾವತಿಯಾಗುವಂತಿರಬೇಕು.

ಮೇಲೆ ತಿಳಿಸಿದ ಆಸಕ್ತ ಖರೀದಿದಾರರು ನಮೂದಿಸಿರುವ ಮೊತ್ತಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಸಾರ್ವಜನಿಕರನ್ನು ವಿನಂತಿಸಲಾಗಿದೆ. ಮೇಲೆ ತಿಳಿಸಲಾದ ಆಸಕ್ತ ಖರೀದಿದಾರರು ನಮೂದಿಸಿರುವ ಮೊತ್ತಕ್ಕಿಂತ ಹೆಚ್ಚಿನ ಯಾವುದೇ ಬಿಡ್‌ಗಳನ್ನು ಐಸಿಐಸಿಐ ಎಚ್‌ಎಫ್‌ಸಿ ಸ್ವೀಕರಿಸದಿದ್ದಲ್ಲಿ, ಅಡಮಾನಗೊಳಿಸಿದ ಆಸ್ತಿಯನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8(8)ರೊಂದಿಗೆ ಓದಲಾದ ನಿಯಮ 9(1)ರ ಪ್ರಕಾರ ಸದರಿ ಆಸಕ್ತ ಖರೀದಿದಾರರಿಗೆ ಮಾರಾಟ ಮಾಡಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಪರಿಶೀಲನೆ, ಹರಾಜಿನ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ಅಥವಾ ಟೆಂಡರ್‌ಗಳ ಸಲ್ಲಿಕೆಗಾಗಿ, ದಯವಿಟ್ಟು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಅನ್ನು 022-69974300 ಅಥವಾ ನಮ್ಮ ಮಾರಾಟ ಮತ್ತು ಮಾರ್ಕೆಟಿಂಗ್ ಪಾಲುದಾರ NexXen Solutions Private Limited ನ್ನು ಸಂಪರ್ಕಿಸಬಹುದು. ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು https://www.icicihfc.com/ ಗೆ ಭೇಟಿನೀಡಿ.

ದಿನಾಂಕ: ಜುಲೈ 02, 2024
ಸ್ಥಳ: ಬೆಂಗಳೂರು
ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

ICICI Home Finance
ಕಾರ್ಪೊರೇಟ್ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ-400059, ಭಾರತ.
ಶಾಖಾ ಕಚೇರಿ: 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯ ರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560 066

(ನಿಯಮ 8(6)ರ ನಿಬಂಧನೆಯನ್ನು ನೋಡಿ)
ಸ್ಥಿರ ಸ್ವತ್ತುಗಳ ಮಾರಾಟಕ್ಕಾಗಿ ನೋಟೀಸು

ಹಣಕಾಸು ಸ್ವತ್ತುಗಳ ಭದ್ರತೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯ್ದೆ 2002ರ ಅನುಷ್ಠಾನದ ಅಡಿಯಲ್ಲಿ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ಓದಲಾದ ನಿಯಮ 8 (6)ರ ನಿಬಂಧನೆಯೊಂದಿಗೆ ಸ್ಥಿರ ಸ್ವತ್ತುಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ನೋಟೀಸು.

ಈ ನೋಟೀಸಿನ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಖಾತರಿದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಸಾಲಗಾರರು/ಖಾತರಿದಾರರು ಸಂರಕ್ಷಿತ ಸಾಲದಾತರಿಗೆ ಅಡಮಾನಕ್ಕೆ /ಹೊಣೆಗಾರಿಕೆಗೆ ನೀಡಿದ್ದಾರೆ. ಪ್ರಸಕ್ತ ಅದು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರ **ಭೌತಿಕ ಸ್ವಾಧೀನದಲ್ಲಿದ್ದು,** ಅದನ್ನು "ಹೇಗಿದೆಯೋ ಹಾಗೆ" "ಎಲ್ಲಿದೆಯೋ ಅಲ್ಲಿ" "ಯಥಾಸ್ಥಿತಿಯಲ್ಲಿ" ಈ ಕೆಳಗೆ ನೀಡಿರುವ ಸಂಕ್ಷಿಪ್ತ ವಿವರಣೆಗಳ ಪ್ರಕಾರ ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲಗಾರ(ರು)/ಸಹ ಸಾಲಗಾರರು/ ಜಾಮೀನು ದಾರರು/ ಕಾನೂನು ಉತ್ತರಾಧಿಕಾರಿಗಳ ಹೆಸರು/ ಸಾಲ ಖಾತೆ ಸಂಖ್ಯೆ.	ಸಂರಕ್ಷಿತ ಆಸ್ತಿ(ಗಳ) ವಿವರಗಳು ತಿಳಿದಿರುವ ಹೊರೆಗಳೊಂದಿಗೆ, ಯಾವುದಾದರೂ ಇದ್ದರೆ.	ಬಾಕಿ ಮೊತ್ತ	ಕಾದಿರಿಸಿದ ಬೆಲೆ / ಮುಂಗಡ ಹಣ ಠೇವಣಿ	ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ವಿಜಯ್ ಕುಮಾರ್ ಆರ್ (ಸಾಲಗಾರ) ಆರ್ ಸರೋಜಾ (ಸಹ ಸಾಲಗಾರ) ಸಾಲ ಖಾತೆ ಸಂಖ್ಯೆ. LHBWQ00001455793 & LHBWQ00001455450	ಆಸ್ತಿ ನಂ.14 ರಲ್ಲಿ ರೂಪಿಸಲಾಗಿರುವ, ಅಸೆಸ್ಮೆಂಟ್ ಖಾತಾ ನಂ.14ನ್ನು ಹೊಂದಿರುವ ಸೈಟ್ ನಂ. 173ರ ಸ್ಥಿರಾಸ್ತಿಯ ಎಲ್ಲಾ ಸರ್ವಾಂಗ. ಸದರಿ ಆಸ್ತಿಯು ಬೆಂಗಳೂರು ಜಿಲ್ಲೆ ,ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದನಾಯಕನಹಳ್ಳಿ ಪಂಚಾಯತ್ ವ್ಯಾಪ್ತಿಯಲ್ಲಿದ್ದು ಕಮ್ಮಸಂದ್ರ ಗ್ರಾಮದಲ್ಲಿ ನೆಲೆಗೊಂಡಿದೆ.	ರೂ. 29,30,780/- ಜೂನ್ 24, 2024	ರೂ. 31,42,152/- ರೂ. 3,14,220/-	ಜುಲೈ 08, 2024ರಂದು ಪೂರ್ವಾಹ್ನ 11:00 - ಅಪರಾಹ್ನ 03:00	ಜುಲೈ 19, 2024ರಂದು ಅಪರಾಹ್ನ 02:00 - 03:00
2.	ಆಶಾ ಕುಪೇಂದ್ರ (ಸಾಲಗಾರ) ಕುಪೇಂದ್ರ ಆರ್(ಸಹ-ಸಾಲಗಾರ) ಸಾಲ ಖಾತೆ ಸಂಖ್ಯೆ. LHBYW00001497658 & LHBYW00001497598	ಸೈ ನಂ.69/2ರಲ್ಲಿ ರೂಪಿಸಲಾಗಿರುವ ಬಂಜಾರ್ ಸಂಖ್ಯೆ. 194ನ್ನು ಹೊಂದಿರುವ, ಅಧಿಕೃತ ಜ್ಞಾಪನ ಸಂಖ್ಯೆ ಎಎಲ್ ಎನ್ ಎಸ್‌ಆರ್(ಎಸ್) 7/1993-94ರ ಪ್ರಕಾರ ವಸತಿ ಉದ್ದೇಶಕ್ಕೆ ಪರಿವರ್ತಿಸಲಾಗಿರುವ, ಖಾಲಿ ವಸತಿ ನಿವೇಶನ ನಂ.32ರ ಎಲ್ಲಾ ಸರ್ವಾಂಗ. ಸದರಿ ಆಸ್ತಿಯ ಬೆಂಗಳೂರು. ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಚುಂಚನಕುಪ್ಪೆಯಲ್ಲಿ ನೆಲೆಗೊಂಡಿದೆ.	ರೂ. 25,07,154/- ಜೂನ್ 24, 2024	ರೂ. 34,44,525/- ರೂ. 3,44,460/-	ಜುಲೈ 08, 2024ರಂದು ಪೂರ್ವಾಹ್ನ 11:00 - ಅಪರಾಹ್ನ 03:00	ಜುಲೈ 19, 2024ರಂದು ಅಪರಾಹ್ನ 02:00 - 03:00

ಆನ್‌ಲೈನ್ ಹರಾಜನ್ನು ನಮ್ಮ ಹರಾಜು ಏಜೆನ್ಸಿ **GlobeTech**ನ ವೆಬ್‌ಸೈಟ್‌ನಲ್ಲಿ (**URL Link-/ https://BestAuctionDeal.com**) ನಡೆಸಲಾಗುವುದು. ಅಡಮಾನದಾರರಿಗೆ ನೋಟೀಸಿನ ಮೂಲಕ ಒಟ್ಟು ಬಾಕಿಯನ್ನು ಮುಂದಿನ ಬಡ್ಡಿಯೊಂದಿಗೆ ಪಾವತಿಸಲು **ಜುಲೈ 18, 2024ರ ಅಪರಾಹ್ನ 5.00**ರವರೆಗೆ ಕೊನೆಯ ಅವಕಾಶವನ್ನು ನೀಡಲಾಗಿದೆ. ವಿಫಲವಾದಲ್ಲಿ ಮೇಲಿನ ವೇಳಾಪಟ್ಟಿಯ ಪ್ರಕಾರ ಈ ಸುರಕ್ಷಿತ ಸ್ವತ್ತುಗಳನ್ನು ಮಾರಾಟ ಮಾಡಲಾಗುತ್ತದೆ.

ನಿರೀಕ್ಷಿತ ಬಿಡ್‌ದಾರ(ರು) ಮುಂಗಡ ಹಣ ಠೇವಣಿ (ಇಎಂಡಿ) ಆರಟಿಜಿಸಿ/ ಡಿಮಾಂಡ್ ಡ್ರಾಫ್ಟ್ (ಡಿಡಿ)ನ್ನು (ಕಾಲಮ್ ಇ ನೋಡಿ) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯ ರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560 066-** ಇಲ್ಲಿ **ಜುಲೈ 18, 2024ರಂದು ಅಪರಾಹ್ನ 04:00**ರೊಳಗೆ ಅಥವಾ ಅದಕ್ಕೂ ಮೊದಲು ಮೊದಲು ಸಲ್ಲಿಸತಕ್ಕದ್ದು. ನಿರೀಕ್ಷಿತ ಬಿಡ್‌ದಾರ(ರು) ನೋಂದಣಿ ಫಾರ್ಮ್ ಮತ್ತು ಬಿಡ್ ನಿಯಮಗಳು ಮತ್ತು ಷರತ್ತುಗಳ ಫಾರ್ಮ್‌ನ ಸಹಿಮಾಡಿದ ಪ್ರತಿಯನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560 066 -** ಇಲ್ಲಿ **ಜುಲೈ 18, 2024ರಂದು ಅಪರಾಹ್ನ 05.00**ರೊಳಗೆ ಅಥವಾ ಅದಕ್ಕೂ ಮೊದಲು ಸಲ್ಲಿಸತಕ್ಕದ್ದು . ಮುಂಗಡ ಹಣ ಠೇವಣಿ ಡಿಮಾಂಡ್ ಡ್ರಾಫ್ಟ್ (ಡಿಡಿ) **"ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು"** ಪರವಾಗಿ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ಪಡೆದಿದ್ದು ಬೆಂಗಳೂರಿನಲ್ಲಿ ಪಾವತಿಯಾಗುವಂತಿರಬೇಕು.

ಪರಿಶೀಲನೆ, ಹರಾಜಿನ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ಅಥವಾ ಟೆಂಡರ್‌ಗಳ ಸಲ್ಲಿಕೆಗಾಗಿ, ದಯವಿಟ್ಟು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಅನ್ನು 9920807300 ಅಥವಾ ನಮ್ಮ ಮಾರಾಟ ಮತ್ತು ಮಾರ್ಕೆಟಿಂಗ್ ಪಾಲುದಾರ **NexXen Solutions Private Limited** ನ್ನು ಸಂಪರ್ಕಿಸಬಹುದು. ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು https://www.icicihfc.com/ ಗೆ ಭೇಟಿನೀಡಿ.

ದಿನಾಂಕ: ಜುಲೈ 02, 2024
ಸ್ಥಳ: ಬೆಂಗಳೂರು
ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್